## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
### ವಾರ್ಡ್ 93, ವಸಂತನಗರ
### ವಾರ್ಡ್ ಸಮಿತಿ ಸಭೆಯ ನಡಾವಳಿಗಳು

ದಿನಾಂಕ:21-05-2022 ರಂದು ಶನಿವಾರ ಬೆಳಿಗ್ಗೆ 11.00 ಗಂಟೆಗೆ ಮಾನ್ಯ ನೋಡೆಲ್ ಅಧಿಕಾರಿಗಳು ಹಾಗೂ ತಹಶಿಲ್ದಾರ್ (ಚುನಾವಣೆ) ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನಡೆಸಲಾಯಿತು. ಹಾಗೂ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:93 ಬಿಬಿಎಂಪಿ ಸಭೆಯನ್ನು ನಡೆಸಿಕೊಟ್ಟರು ಹಾಗೂ ಸಮಿತಿಸಭೆಗೆ ಹಾಜರಾದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರುಗಳು,

| ಕ್ರಮ ಸಂಖ್ಯೆ: | ಹೆಸರು | ಸಮಿತಿ ಸಭೆಯ | ಮೋಬೆಲ್ ಸಂಖ್ಯೆ |
|---|---|---|---|
| 1 | ಶ್ರೀಮತಿ.ಮಂಜುಳಮ್ಮ | ನೋಡಲ್ ಅಧಿಕಾರಿಗಳು | |
| 2 | ಶ್ರೀ.ಕೆ.ಜೆ.ಸಿ. ಕುಮಾರ್ | ಸಮಿತಿ ಸದಸ್ಯರು | |
| 3 | ಶ್ರೀಮತಿ. ಚಿತ್ರಾ ವೆಂಕಟೇಶ್ | ಸದಸ್ಯರು | |
| 4 | ಶ್ರೀ.ಲಕ್ಷ್ಮೀಶ (ಲಚ್ಚಿ) | ಸದಸ್ಯರು | |
| 5 | ಶ್ರೀ.ಪ್ರಕಾಶ್ ನೆಡುಂಗಾಡಿ | ಎಎಪಿ ವಾರ್ಡ್ 93 ಉಸ್ತುವಾರಿ | |
| 6 | ಶ್ರೀ.ಧರ್ಮರಾಜ ಜಿ ನಾಯಕ್ | ಸಹಾಯಕ ಅಭಿಯಂತರರು | |
| 7 | ಶ್ರೀ.ಜಯರಾಜು | ಕೆಲಸ ಪರಿವೀಕ್ಷಕರು | |
| 8 | ಕುಮಾರಿ ರೇಣಿಕಾಂಬ | ಹಿರಿಯ ಆರೋಗ್ಯ ಪರಿವೀಕ್ಷಕರು | |
| 9 | ಶ್ರೀ.ಮೂರ್ತಿ | ಕಂದಾಯ ವಸೂಲಿಗಾರರು | |
| 10 | ಶ್ರೀ.ಮನೋಜ್‌ಕುಮಾರ್ | ಕಿರಿಯ ಆರೋಗ್ಯ ಪರಿವೀಕ್ಷಕರು | |
| 11 | ಶ್ರೀ.ಶರತ್‌ಕುಮಾರ್ | ಕಿರಿಯ ಆರೋಗ್ಯ ಪರಿವೀಕ್ಷಕರು | |
| 12 | ಶ್ರೀ.ಎಂ.ಎಸ್. ನಂಜುಡಮೂರ್ತಿ | ಸಾರ್ವಜನಿಕರು | |
| 13 | ಶ್ರೀ.ವೈಭವ್ ಆರ್.ಸಿ | ಸಂಯೋಜಕರು ವಾರ್ಡ್ 93 | |
| 14 | ಶ್ರೀ.ಕೀರ್ತಿ ಎ.ಎಸ್. | ವಾರ್ಡ್ ಮಾರ್ಷಲ್ | |
| 15 | | | |

### ಗೈರು ಹಾಜರಾದ ಸದಸ್ಯರು ಮತ್ತು ಅಧಿಕಾರಿಗಳು

| ಕ್ರಮ ಸಂಖ್ಯೆ: | ಹೆಸರು | ಸಮಿತಿ ಸಭೆಯ | ಮೋಬೆಲ್ ಸಂಖ್ಯೆ |
|---|---|---|---|
| 1 | ಶ್ರೀ.ಅಜೇಯ್‌ಕುಮಾರ್ | ಸದಸ್ಯರು | |
| 2 | ಶ್ರೀ. ರಾಜ್ ದುಗ್ಗಾರ್ | ಸದಸ್ಯರು | |
| 3 | ಶ್ರೀ.ಮಾಧವನ್ | ಸದಸ್ಯರು | |
| 4 | ಶ್ರೀ.ರವೀಂದ್ರನಾಥ | ಸದಸ್ಯರು | |
| 5 | ಶ್ರೀಮತಿ.ಲಕ್ಷ್ಮಿದೇವಿ ಆನಂದ | ಸದಸ್ಯರು | |
| 6 | ಶ್ರೀಮತಿ.ಜಿ.ಕೆ.ವತ್ಸಲ | ಸದಸ್ಯರು | |
| 7 | ಶ್ರೀಮತಿ. ರಾಧಮ್ಮ | ಸದಸ್ಯರು | |

Scanned with CamSca

| | | | |
|---|---|---|---|
| 8 | ಶ್ರೀ.ಬಿ.ವಿ ಸುರೇಶ್ | ಸದಸ್ಯರು | |
| 9 | ಶ್ರೀ.ಬಾನು ಪ್ರಕಾಶ್ | ಸದಸ್ಯರು | |
| 10 | ಶ್ರೀ.ಪ್ರಕಾಶ್‌ಚಂದ್ರ | ಸದಸ್ಯರು | |
| 11 | ಶ್ರೀಮತಿ.ಪ್ರಿಯಾಚೆಟ್ಟಿ | ಸದಸ್ಯರು | |
| 12 | ಶ್ರೀ.ಸುನಿಲ್‌ಕುಮಾರ್ | ಸದಸ್ಯರು | |
| 13 | ಶ್ರೀ. ಸಂದೀಪ್ ಸಿಂಗ್ | ಬೀದಿ ದೀಪ ನಿರ್ವಹಣೆ ಬೆಸ್ಕಾಂ | |
| 14 | ಡಾ॥ ಸೈಯದ್ ಇಸ್ಮಾಯಿಲ್ | ಆರೋಗ್ಯ ವೈದ್ಯಾಧಿಕಾರಿಗಳು | |
| 15 | ಶ್ರೀ.ಗೋವಿಂದಗೌಡ | ತೋಟಗಾರಿಕೆ ಇಲಾಖೆ | |
| 16 | ಶ್ರೀ. ಮಹಮದ್ ಜಾವೇದ್.ಎ.ಎಸ್ | ಸಹಾಯಕ ಕಾರ್ಯಪಾಲಕ ಅಭಿಯಂತರರು | |
| 17 | ಶ್ರೀ.ಕೋದಂಡರೆಡ್ಡಿ | ಸಹಾಯಕ ಅಭಿಯಂತರರು ಸ್ಮಾಟ್ ಸಿಟಿ | |
| 18 | ಶ್ರೀ.ನವೀನ್‌ಕುಮಾರ | ವೈದ್ಯಾಧಿಕಾರಿ ಶಿವಾಜಿನಗರ | |
| 19 | ಶ್ರೀ.ನಬಿ | ಆರಕ್ಷಕ ಉಪ ನೀರಿಕ್ಷಕರು | |
| 20 | ಶ್ರೀ.ದುರ್ಗಾಪ್ರಸಾದ್ | ಸಹಾಯಕ ಅಭಿಯಂತರರು ವಿದ್ಯುತ್ ಇಲಾಖೆ ಬೀದಿ ನಿರ್ವಹಣೆ | |
| 21 | ಶ್ರೀ.ಮಹೇಶ್‌ಕುಮಾರ್ | ಸಹಾಯಕ ಅಭಿಯಂತರರು BWSSB | |
| 22 | ಶ್ರೀಮತಿ.ವೀಣಾ | ಸಹಾಯಕ ಕಂದಾಯ ಅಧಿಕಾರಿ | |

**ದಿನಾಂಕ:21-05-2022 ರಂದು ಶನಿವಾರ ಬೆಳಿಗ್ಗೆ 11.00 ಗಂಟೆಗೆ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು**

1) ಶ್ರೀಮತಿ. ಮಂಜುಳಮ್ಮ ನೋಡಲ್ ಅಧಿಕಾರಿಗಳು ಸಮಿತಿ ಸಭೆಯ ಎಲ್ಲಾ ಅಧಿಕಾರಿಗಳು ಹಾಗೂ ಸದಸ್ಯರನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲು ಸೂಚಿಸಿದರು ಹಾಗೂ ಹಿಂದಿನ ಸಭೆಯ ನಡಾವಳಿಗಳನ್ನು ಸಭೆಗೆ ಮಂಡಿಸಿದರು.

2) ಸಭೆಯ ನಡಾವಳಿಗಳು ಹಾಗೂ ತೆಗೆದುಕೊಂಡು ಕ್ರಮಗಳ ಬಗ್ಗೆ ಸಭೆಯಲ್ಲಿ ವಿವರಿಸಲಾಯಿತು. ಹಾಗೂ ಇಂದಿನ ಸಭೆಯಲ್ಲಿ ಚರ್ಚಿಸುವ ಸಂಬಂಧ ಮಾನ್ಯ ಸದಸ್ಯರುಗಳಲ್ಲಿ ವಿನಂತಿಸಲಾಯಿತು.

3) ಸಮಿತಿ ಸದಸ್ಯರಾದ ಶ್ರೀ.ಕೆ.ಜೆ.ಸಿ.ಕುಮಾರ್ ರವರು ಮಾತನಾಡಿ ರೈಲ್ವೆ ಸಮಾನಾಂತರ ರಸ್ತೆಯಲ್ಲಿ ರಸ್ತೆ ಮೂಲ ಸೌಕರ್ಯ (ಟಿ.ಇ.ಸಿ) ವಿಭಾಗದ ವತಿಯಿಂದ ಕೈಗೊಂಡಿರುವ ಕಾಮಗಾರಿಯನ್ನು ಪ್ರಾರಂಭಿಸುವ ಮುನ್ನ ವಾರ್ಡ್ ಇಂಜಿನಿಯರ್ ರವರೊಡನೆ ಚರ್ಚಿಸಿ ಪರಸ್ಪರ ಸಹಯೋಗದೊಂದಿಗೆ ನಿರ್ವಹಿಸುವುದು ಸೂಕ್ತವೆಂದು ತಿಳಿಸುತ್ತಾ, ಕಾಮಗಾರಿಯ ಹೆಸರು, ಕಾಮಗಾರಿ ಮೊತ್ತ, ಗುತ್ತಿಗೆದಾರರ ಹೆಸರು ಮತ್ತು ಮೊಬೈಲ್ ಸಂಖ್ಯೆ ಸೂಚಿಸುವ ಫಲಕವನ್ನು ಅಳವಡಿಸಬೇಕೆಂದು ಸೂಚಿಸಿದರು. ಮತ್ತು ರಕ್ಷಣಾ ತಡೆಗಟ್ಟುಗಳನ್ನು ಅಳವಡಿಸಲು ಕೋರಿದರು. ಟಿ.ಇ.ಸಿ ಮತ್ತು ಅರಣ್ಯ ಇಲಾಖೆಯವರೊಂದಿಗೆ ಕುಮಾರ ಪಾರ್ಕ್ ನಿವಾಸಿಗಳೊಂದಿಗೆ ಪ್ರತ್ಯೇಕ ಸಭೆ ನಡೆಸಿ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಸೂಚಿಸಿದರು. ಮತ್ತು ಈಗಾಗಲೇ ಮಳೆಗಾಲ ಪ್ರಾರಂಭವಾಗಿರುವುದರಿಂದ ಗಿಡಗಳ ರಂಭೆಗಳನ್ನು ಟ್ರಿಮ್ ಮಾಡಲು ಮತ್ತು ಕುಮಾರ ಪಾರ್ಕ್‌ನಲ್ಲಿನ ಎಲೆಗಳನ್ನು ತೆರವುಗೊಳಿಸಲು ಕೂಡಲೇ ಕ್ರಮಕೈಗೊಳ್ಳಬೇಕೆಂದು ಸೂಚಿಸುತ್ತಾ, ವಿ.ಎಸ್ ರಾಜು ರಸ್ತೆಯಲ್ಲಿ ಹೊಸದಾಗಿ ಎಂ.ಎಸ್.ಐ.ಎಲ್ ವತಿಯಿಂದ ತೆರೆಯಲಾಗಿರುವ ವೈನ್‌ಶಾಪ್‌ನ್ನು ಬೇರೆಡೆ ಸ್ಥಳಾಂತರಿಸುವ ಬಗ್ಗೆ ಈಗಾಗಲೇ ಸ್ಥಳೀಯ ಶಾಸಕರಿಗೆ ಮನವಿ ನೀಡಲಾಗಿದ್ದು,

Scanned with CamSca

ಕೂಡಲೇ ಕ್ರಮಕೈಗೊಳ್ಳಲು ಒತ್ತಾಯಿಸಿದರು. ಬೆಸ್ಕಾಂ ವಿಭಾಗದವರು ಕುಮಾರ ಪಾರ್ಕ್‌ನ 33 ಬೀದಿದೀಪಗಳ ಪೈಕಿ 12 ದೀಪಗಳು ಮಾತ್ರ ಉರಿಯುತ್ತಿದ್ದು, 21 ದೀಪಗಳು ಉರಿಯುತ್ತಿಲ್ಲದೆ ಇರುವುದರಿಂದ ಬೀದಿದೀಪಗಳ ನಿರ್ವಹಣೆಯಲ್ಲಿ ವಿಫಲರಾಗಿರುವುದರಿಂದ ಶ್ರೀ.ಸಂದೀಪ್ ಸಿಂಗ್ ಮತ್ತು ದುರ್ಗಾ ಪ್ರಸಾದ್ ರವರಿಗೆ ಕಾರಣ ಕೇಳಿ ನೋಟಿಸ್ ನೀಡಲು ನೋಡಲ್ ಅಧಿಕಾರಿಯವರಿಗೆ ಒತ್ತಾಯಿಸಿದರು.

4) ಶ್ರೀಮತಿ.ಚಿತ್ರವೆಂಕಟೇಶ ರವರು ಮಾತನಾಡಿ ಕುಮಾರ ಪಾರ್ಕ್‌ನಲ್ಲಿನ ಶೌಚಾಲಯವನ್ನು ಅಭಿವೃದ್ಧಿ ಪಡಿಸಿ ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಲು ಸೂಚಿಸುತ್ತಾ, ಆನೆ ಪಾರ್ಕ್‌ನಲ್ಲಿ ಸುವಿಧಾ ಕ್ಯಾಬಿನ್‌ನ್ನು ಅಳವಡಿಸಿ ಪೌರಕಾರ್ಮಿಕರಿಗೆ ಅನುಕೂಲ ಮಾಡಿಕೊಡುವಂತೆ ಸೂಚಿಸುತ್ತಾ, ಮಳೆ ಬಂದಾಗ ಒಂದರಿಂದ ಒಂದುವರೆ ಅಡಿಗಳಷ್ಟು ನೀರು ಕುಮಾರ ಪಾರ್ಕ್‌ನಲ್ಲಿ ನಿಲ್ಲುತ್ತಿರುವುದರಿಂದ ವಾಯುವಿಹಾರಕ್ಕಾಗಿ ಬರುವ ಸಾರ್ವಜನಕರಿಗೆ ತೊಂದರೆಯಾಗುತ್ತಿದ್ದು, ಪಾರ್ಕ್ ಬದಿ ಚರಂಡಿಯ ಹೂಳನ್ನು ತೆಗೆಯಲು ಕ್ರಮಕೈಗೊಳ್ಳುವಂತೆ ಒತ್ತಾಯಿಸುತ್ತಾ, ರೈಲ್ವೆ ಸಮಾನಾಂತರ ರಸ್ತೆಯಲ್ಲಿನ ಹೋಟೆಲ್ 1179ರ ಮುಂಭಾದಲ್ಲಿನ ಬೀಡಾ ಅಂಗಡಿಯನ್ನು ತೆರವುಗೊಳಿಸುವ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿ ವಾರ್ಡ್ ಸಮಿತಿಯಲ್ಲಿ ಸಭೆಯಲ್ಲಿ ಚರ್ಚಿಸಲಾಗಿರುವ ವಿಷಯಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ನೋಡೆಲ್ ಅಧಿಕಾರಿಯವರ ಗಮನ ಸೆಳೆದರು. ಕೊನೆಯಲ್ಲಿ ಮಾತನಾಡಿ ರೈಲ್ವೆ ಸಮಾನಾಂತರ ರಸ್ತೆಯ 9ನೇ ಅಡ್ಡರಸ್ತೆಯಲ್ಲಿ ಮಳೆ ನೀರು ನಿಲ್ಲುವುದನ್ನು ಶಾಶ್ವತವಾಗಿ ತಡೆಯಲು ಕ್ರಮಕೈಗೊಳ್ಳುವಂತೆ ವಾರ್ಡ್ ಇಂಜಿನಿಯರ್ ರವರಿಗೆ ಸೂಚಿಸಿದರು.

5) ಶ್ರೀ.ಲಕ್ಷ್ಮೀಶ (ಲಚ್ಚಿ) ರವರು ಮಾತನಾಡಿ ವಸಂತನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಔಷದಿ ಮತ್ತು ಸಲಕರಣೆಗಳಿಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಈ ಬಗ್ಗೆ ಆರೋಗ್ಯ ವೈದ್ಯಾಧಿಕಾರಿಗಳು ಕ್ರಮಕೈಗೊಳ್ಳುವಂತೆ ಸೂಚಿಸುತ್ತಾ, ತಿಮ್ಮಯ್ಯ ರಸ್ತೆಯ ಹ್ಯೂಂಡೈ ಶೋ ರೂಂ ಪಕ್ಕದ ಪೈ ಹೋಟೆಲ್ ಮಾಲೀಕರು ಪಾದಚಾರಿ ಮಾರ್ಗದಲ್ಲಿ ಒತ್ತುವರಿ ಮಾಡಿರುವ ಪಾದಚಾರಿ ಮಾರ್ಗವನ್ನು ತೆರವುಗೊಳಿಸುವಂತೆ ಸೂಚಿಸಿದರು.

6) ಶ್ರೀ. ಪ್ರಕಾಶ ನೆಡುಂಗಾಡಿ ಎಎಪಿ ವಾರ್ಡ್ ಉಸ್ತುವಾರಿಗಳು ಮಾತನಾಡಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿನ ಡಯಾಲಿಸಿಸ್‌ಗಾಗಿ ನಿರ್ಮಿಸಿರುವ ಕೇಂದ್ರದಲ್ಲಿ ಡಯಾಲಿಸಿಸ್ ಉಪಕರಣಗಳು ಇಲ್ಲದೆ ಖಾಲಿ ಇರುವ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಾ, ವಸಂತನಗರ 1ನೇ ಮುಖ್ಯರಸ್ತೆಯಲ್ಲಿನ ಆಟದ ಮೈದಾನ ಮತ್ತು ಗ್ರಂಥಲಾಯಗಳನ್ನು ಅಭಿವೃದ್ಧಿ ಪಡಿಸಿ ವಸಂತನಗರ 2ನೇ ಅಡ್ಡರಸ್ತೆಯಲ್ಲಿರುವ ಪಾರ್ಕ್‌ನ ಗೇಟ್ ಮುರಿದು ಹೋಗಿದ್ದು, ದುರಸ್ಥಿ ಮಾಡಲು ಸೂಚಿಸಿ ಕನ್ನಿಂಗ್‌ಹ್ಯಾಮ್ ಕ್ರಸೆಂಟ್ ರಸ್ತೆ, 9ನೇ ಅಡ್ಡರಸ್ತೆ ಮತ್ತು ಪ್ಯಾಲೇಸ್ ಕ್ರಾಸ್ ರಸ್ತೆಗಳಲ್ಲಿ ಮ್ಯಾನ್‌ಹೋಲ್‌ಗಳು ಉಕ್ಕಿ ಹರಿಯುವ ಬಗ್ಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರಿಗೆ ಸೂಚಿಸುತ್ತಾ, ವಾರ್ಡ್‌ನಲ್ಲಿನ ಎಲ್ಲಾ ಬೃಹತ್ ನೀರುಗಾಲುವೆಗಳನ್ನು ಕೂಡಲೇ ಶುಚಿಗೊಳಿಸಲು ಕ್ರಮಕೈಗೊಳ್ಳಲು ಸೂಚಿಸಿದರು. ಮತ್ತು ಮಳೆಗಾಲದಲ್ಲಿ ಪ್ರವಾಹಕ್ಕೆ ಒಳಗಾಗುವ ಪ್ರದೇಶಗಳನ್ನು ಗುರುತಿಸಿ ಅಗತ್ಯ ಕ್ರಮಕೈಗೊಳ್ಳಲು ಸೂಚಿಸುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮಕೈಗೊಂಡು ವಾರ್ಡ್ ಸುರಕ್ಷತೆಗಾಗಿ ಬಾಕಿ ಇರುವ ಜಾಗಗಳಲ್ಲಿ ಸಿ.ಸಿ ಕ್ಯಾಮರಗಳನ್ನು ಅಳವಡಿಸಲು 2022-23ನೇ ಸಾಲಿನ ವಾರ್ಡ್ ಅನುದಾನದಲ್ಲಿ ಸೇರಿಸಿಕೊಳ್ಳಲು ಸೂಚಿಸುತ್ತಾ, ವಾರ್ಡಿನಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಶೌಚಾಲಯಗಳ ಅವಶ್ಯಕತೆ ಇರುವ ಬಗ್ಗೆ ವಿವರಿಸಿದರು.

Scanned with CamScanner

7) ಸಭೆಯಲ್ಲಿ ಮಾನ್ಯ ನೋಡಲ್ ಅಧಿಕಾರಿಗಳು ಎಲ್ಲಾ ಅಂಶಗಳನ್ನು ಪರಿಗಣಿಸಿ ಸೂಕ್ತ ಕ್ರಮಕೈಗೊಳ್ಳಲು ಆದೇಶಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯ ಮಾಡಲಾಯಿತು

ಸಹಿ/-
ಮಾನ್ಯ ನೋಡಲ್ ಅಧಿಕಾರಿಗಳು
ವಾರ್ಡ್-93, ವಸಂತನಗರ
ಬಿ.ಬಿ.ಎಂ.ಪಿ

21/05/2022
ಸದಸ್ಯ ಕಾರ್ಯದರ್ಶಿಗಳು
ವಾರ್ಡ್-93, ವಸಂತನಗರ
ಬಿ.ಬಿ.ಎಂ.ಪಿ

Scanned with CamSca